ಕರ್ನಾಟಕ ವಿಧಾನ ಸಭೆ

1	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ :	1813
2	ಉತ್ತರಿಸಬೇಕಾದ ದಿನಾಂಕ :	24/07/2024
3	ಮಾನ್ಯ ವಿಧಾನ ಸಭೆ ಸದಸ್ಯರು	ಶ್ರೀ ಗುರ್ಮೆ ಸುರೇಶ್ ಶೆಟ್ಟಿ (ಕಾಪು)
4	ಉತ್ತರಿಸಬೇಕಾದ ಸಚಿವರು	ಮಾನ್ಯ ಕೃಷಿ ಸಚಿವರು

ಕ್ರ .ಸಂ.	ಪ್ರಶ್ನೆ	ಉತ್ತರ
ಅ)	ಉಡುಪಿ ಜಿಲ್ಲೆಯಲ್ಲಿ ಭತ್ತದ ಬೆಳೆ ಪ್ರಮುಖ ಜೀವನೋಪಾಯ ಬೆಳೆಯಾಗಿದ್ದು , ರೈತರು ಎಂ.ಓ-4 ಭತ್ತದ ತಳಿಯ ಬೀಜವನ್ನು ಪ್ರಮುಖ ಭತ್ತದ ಬೆಳೆಯನ್ನಾಗಿ ಉಪಯೋಗಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು. ಉಡುಪಿ ಜಿಲ್ಲೆಯಲ್ಲಿ ಭತ್ತದ ಬೆಳೆ ಪ್ರಮುಖ ಜೀವನೋಪಾಯ ಬೆಳೆಯಾಗಿದ್ದು , ರೈತರು ಎಂ .ಓ-4 ಭತ್ತದ ತಳಿಯ ಬೀಜವನ್ನು ಪ್ರಮುಖ ಭತ್ತದ ಬೆಳೆಯನ್ನಾಗಿ ಉಪಯೋಗಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ .
ಆ)	ಬಂದಿದ್ದಲ್ಲಿ , ರೈತರ ಬೇಡಿಕೆಗೆ ಅನುಗುಣವಾಗಿ ಎಂ.ಓ-4 ತಳಿಯ ಬೀಜವನ್ನು ಸರಿಯಾಗಿ ಪೂರೈಕೆ ಮಾಡದೇ ಇರುವುದರಿಂದ ರೈತರು ಸಂಕಷ್ಟಕ್ಕೆ ಈಡಾಗಿರುವುದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆಯೇ ;	2023-24 ನೇ ಸಾಲಿನಲ್ಲಿ ಬರದ ಪರಿಸ್ಥಿತಿಯಿಂದಾಗಿ ನಿರೀಕ್ಷಿತ ಪ್ರಮಾಣದಲ್ಲಿ ಪ್ರಮಾಣಿತ ಭತ್ತಎಂ .ಓ-4 ಬಿತ್ತನೆ ಬೀಜವನ್ನು ಉತ್ಪಾದನೆ ಮಾಡಲು ಸಾಧ್ಯಾವಾಗಿರುವುದಿಲ್ಲ . ರೈತರಿಗೆ ತೊಂದರೆಯಾಗದಂತೆ ಉತ್ಪಾದನೆಯಲ್ಲಿ ಲಭ್ಯವಾದ ಎಂ .ಓ-4 ಬಿತ್ತನೆ ಬೀಜವನ್ನು ಜಿಲ್ಲೆಗೆ ಸರಬರಾಜು ಮಾಡಲಾಗಿರುತ್ತದೆ .
ಇ)	ರೈತರ ಬೇಡಿಕೆಗನುಗುಣವಾಗಿ ಎಂ.ಓ-4 ಭತ್ತದ ತಳಿಯ ಬೀಜವನ್ನು ಸಬ್ಸಿಡಿ ದರದಲ್ಲಿ ರೈತರಿಗೆ ಸಕಾಲದಲ್ಲಿ ಪೂರೈಸಲು ಸರ್ಕಾರ ತೆಗೆದುಕೊಂಡ ಕ್ರಮಗಳು ಯಾವುವು ?	ಕರ್ನಾಟಕ ರಾಜ್ಯ ಬೀಜ ನಿಗಮ (ನಿ .) ಹಾಗೂ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾನಿಲಯ , ಶಿವಮೊಗ್ಗ ರವರು ಉತ್ಪಾದಿಸಿದ 959.96 ಕ್ವಿಂ . ಪ್ರಮಾಣಿತ ಬಿತ್ತನೆ ಬೀಜದಲ್ಲಿ ಉಡುಪಿ ಜಿಲ್ಲೆಗೆ 576.75 ಕ್ವಿಂ .ಗಳನ್ನು ಸರಬರಾಜು ಮಾಡಲಾಗಿರುತ್ತದೆ . ಪ್ರಸ್ತುತ ಸಾಲಿನಲ್ಲಿಎಂ .ಓ-4 ನಿಜ ಚೀಟಿ ಬಿತ್ತನೆ ಬೀಜವನ್ನು ಖರೀದಿಸಿ 249.5 ಕ್ವಿಂ .ಗಳನ್ನು ಜಿಲ್ಲೆಗೆ ಸರಬರಾಜು ಮಾಡಲಾಗಿರುತ್ತದೆ . ಎಂ.ಓ-4 ತಳಿಯ ಬಿತ್ತನೆ ಬೀಜವಲ್ಲದೆ ಎಂ .ಓ-4 ತಳಿಗೆ ಪರ್ಯಾಯವಾದ ಸಹ್ಯಾದ್ರಿ ಕೆಂಪುಮುಕ್ತಿ ಭತ್ತದ 440 ಕ್ವಿಂ . ಬಿತ್ತನೆ ಬೀಜವನ್ನು ಸರಬರಾಜು ಮಾಡಲಾಗಿರುತ್ತದೆ . ಇದರ ಜೊತೆಗೆ ಉಮಾ (196.5 ಕ್ವಿಂ) ಮತ್ತು ಜ್ಯೋತಿ (79.5 ಕ್ವಿಂ) ಬಿತ್ತನೆ ಬೀಜಗಳನ್ನು ಸರಬರಾಜು ಮಾಡಲಾಗಿರುತ್ತದೆ . ಕೃಷಿ ಇಲಾಖೆಯಿಂದ ವಿತರಿಸಲಾಗುವ ಭತ್ತದ ಎಲ್ಲಾ ತಳಿಗಳ ಬಿತ್ತನೆ ಬೀಜಗಳಿಗೆ ಸಾಮಾನ್ಯ ರೈತರಿಗೆ ಪ್ರತಿಕೆ .ಜಿ .ಗೆ ರೂ.8 ರಂತೆ ಮತ್ತು ಪ.ಜಾ/ಪ.ಪಂ ರೈತರಿಗೆ ರೂ .12 ರಂತೆ ಸಹಾಯಧನವನ್ನು ನೀಡಿ ರೈತರಿಗೆ ಸಕಾಲದಲ್ಲಿ ಬಿತ್ತನೆ ಬೀಜವನ್ನು ಪೂರೈಕೆ ಮಾಡಲಾಗಿರುತ್ತದೆ .

ಕೃಷಿ

ನಿರ್ದೇಶಕರು

ಕರ್ನಾಟಕ ಸರ್ಕಾರ
(ಕೃಷಿ ಇಲಾಖೆ)

ಸಂಖ್ಯೆ/SFS/ADA-1/LAQ-1813/2024-25 ಕೃಷಿ ಆಯುಕ್ತರ ಕಾರ್ಯಾಲಯ,
ಶೇಷಾದ್ರಿ ರಸ್ತೆ,
ಬೆಂಗಳೂರು-01
ದಿನಾಂಕ:
19.07.2024
ಇವರಿಗೆ,
ಸರ್ಕಾರದ ಕಾರ್ಯದರ್ಶಿಗಳು,
ಕೃಷಿ ಇಲಾಖೆ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು.

ಮಾನ್ಯರೇ,

ವಿಷಯ: ಮಾನ್ಯ ವಿಧಾನಸಭೆ ಸದಸ್ಯರಾದ ಶ್ರೀ ಗುರ್ಮೆ ಸುರೇಶ್ ಶೆಟ್ಟಿ (ಕಾಪು)ಇವರ ಚುಕ್ಕೆ
ಗುರುತಿಲ್ಲದ ಪ್ರಶ್ನೆ ಸಂಖ್ಯೆ:1813 ಕ್ಕೆ
ಉತ್ತರಗಳನ್ನು ಸಲ್ಲಿಸುವ ಬಗ್ಗೆ. ಉಲ್ಲೇಖ: ಪತ್ರ ಸಂ: ಪ್ರಶಾವಿಸ/16 ನೇ ವಿ ಸ/4 ನೇ ಅ/ LAQ-1813/
2024 ದಿನಾಂಕ:13.07.2024.
****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಶ್ರೀ ಗುರ್ಮೆ ಸುರೇಶ್ ಶೆಟ್ಟಿ (ಕಾಪು) ಮಾನ್ಯ ವಿಧಾನ ಸಭಾ ಸದಸ್ಯರು ಕೇಳಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1813 ಕ್ಕೆ ಉತ್ತರವನ್ನು ಸಿದ್ಧಪಡಿಸಿ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.

ಲಗತ್ತು: ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1813 ಕ್ಕೆ ಉತ್ತರದ ಪ್ರತಿಗಳು.

ತಮ್ಮ
ವಿಶ್ವಾಸಿ,

ಕೃಷಿ
ನಿರ್ದೇಶಕರು